**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ</u>**

**Spl. CASE: 41/2023**

**ಫ್ರಾ.ಸಾ. 1**
**ದೋ.ಸಾ. 1**

| | | |
|---|---|---|
| ಸಾಕ್ಷಿಯ ಹೆಸರು | : | ಶರತ್ ಕುಮಾರ್ |
| ತಂದೆಯ ಹೆಸರು | : | ಲೇಟ್ ನಂಜೇಗೌಡ |
| ವಯಸ್ಸು | : | 46 ವರ್ಷ |
| ಉದ್ಯೋಗ | : | ಪಿ ಎಸ್ ಐ , ಸೈಬರ್ ಕ್ರೆಂ ಪಿ ಎಸ್ |
| ವಾಸ | : | ಚಿಕ್ಕಬಳ್ಳಾಪುರ |

**ದಿನಾಂಕ 23-12-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ</u>**

1). ನಾನು ಅಕ್ಟೋಬರ್ 2019 ರಿಂದ ಇಲ್ಲಿಯವರೆಗೆ ಸೈಬರ್ ಕ್ರೆಂ ಪಿ ಎಸ್ ನಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿಃ 20-09-2022 ರಂದು ಬೆಃ 11-30 ಗಂಟೆ ಸಮಯದಲ್ಲಿ ನಾನು ಠಾಣೆಯಲ್ಲಿದ್ದಾಗ ಬಾತ್ಮೀದಾರರಿಂದ ಬಂದ ಖಚಿತ ಮಾಹಿತಿ ಏನೆಂದರೆ ಚಿಕ್ಕಬಳ್ಳಾಪುರ ತಾ ಕಂದಾವರ ಗ್ರಾಮದ ಸರ್ವೇ ನಂಬರ್ 160 ರ ಜಮೀನಿನಲ್ಲಿ ವೇಣುಗೋಪಾಲ್ ರವರ ಗುಲಾಬಿ ತೋಟದಲ್ಲಿ ಅಕ್ರಮವಾಗಿ ಮಾದಕ ವಸ್ತುವಾದ ಗಾಂಜಾ ಗಿಡಗಳನ್ನು ಮಾರಟ ಮಾಡುವ ಉದ್ದೇಶದಿಂದ ಬೆಳೆಸಿರುವುದಾಗಿ ಮಾಹಿತಿ ಬಂದಿರುತ್ತದೆ . ಈ ಬಗ್ಗೆ ದಾಳಿ ಮಾಡಿ ಮುಂದಿನ ಕ್ರಮ ಜರುಗಿಸಲು ಮಾನ್ಯ ಜಿಲ್ಲಾ ಪೋಲೀಸ್ ಅಧೀಕ್ಷಕರವರಿಗೆ ಅನುಮತಿ ಕೋರಿ ಮನವಿ ಪತ್ರ ಸಲ್ಲಿಸಿ ಹಾಗೂ ದೂರವಾಣಿ ಮೂಲಕ ಕರೆ ಮಾಡಿ ಮಾಹಿತಿ ನೀಡಿ ಅನಮತಿಯನ್ನು ಪಡೆದುಕೊಂಡಿರುತ್ತೇನೆ. ಸಾಕ್ಷಿ ಖಚಿತ ಮಾಹಿತಿಯನ್ನು ಬರವಣಿಗೆ ಮಾಡಿಕೊಂಡಿರುವ ದಾಖಲೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗ

ನಿಪಿ –1 ಎಂದು , ಸದರಿ ದಾಖಲೆಯಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು .

3. ನಂತರ ದಾಳಿ ಸಮಯದಲ್ಲಿ ಗೆಜೆಟೆಡ್ ಅಧಿಕಾರಿಯಾಗಿ ಹಾಜರಿರಲು ಮನವಿ ಮಾಡಿ ತಹಸೀಲ್ದಾರ್ ರವರಿಗೆ ಮನವಿ ಪತ್ರ ಸಲ್ಲಿಸಿಕೊಂಡಿರುತ್ತೇನೆ. ನಂತರ ಮಹಜರ್ ಕಾಲಕ್ಕೆ ಪಂಚರಾಗಿ ಸಹಕರಿಸಲು ಇಬ್ಬರು ಸಿಬ್ಬಂದಿಗಳನ್ನು ಕಳುಹಿಸಿಕೊಡುವಂತೆ ಕೋರಿ ಮನವಿ ಸಲ್ಲಿಸಿರುತ್ತೇನೆ. ಸಾಕ್ಷಿ ಮೇಲ್ಕಂಡ ಎರಡೂ ಮನವಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ–2 ಮತ್ತು 3 ಎಂದು, ಸಹಿಗಳನ್ನು ನಿಪಿ–2 (ಎ) ಮತ್ತು 3 (ಎ) ಎಂದು ಗುರುತಿಸಲಾಯಿತು. ಅದರಂತೆ ನಗರಸಭೆ ಇಂದ ಚಾಸಾ–2 ಮಂಜುನಾಥ ರವರು ಪಂಚರಾಗಿ ಆಗಮಿಸಿದ್ದು, ಚಾಸಾ–3 ಶ್ರೀಧರ್ ದಾಳಿ ಸ್ಥಳಕ್ಕೆ ಬರುವುದಾಗಿ ತಿಳಿಸಿದ್ದರು. ಚಾಸಾ–2 ರವರಿಗೆ ದಾಳಿಯ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸುವಂತೆ ನೋಟೀಸ್ ನೀಡಿರುತ್ತೇನೆ. ಸಾಕ್ಷಿ ಸದರಿ ನೋಟೀಸ್ ಅನ್ನುನೋಡಿ ಗುರುತಿಸಿದ್ದು, ಅದನ್ನು ನಿಪಿ–4 ಎಂದು , ಸಾಕ್ಷಿಯ ಸಹಿಯನ್ನು ನಿಪಿ–4 (ಎ) ಎಂದು ಗುರುತಿಸಲಾಯಿತು.

4. ನಂತರ ಸಿಬ್ಬಂದಿಗಳಾದ ಚಾಸಾ –5 ರಿಂದ 9 ರವರೊಟ್ಟಿಗೆ, ತೂಕ ಯಂತ್ರ ಮತ್ತು ಅಮಾನುತ್ತು ಪಡಿಸಿಕೊಳ್ಳುವ ಸಲಕರಣೆಗಳೊಂದಿಗೆ ಇಲಾಖಾ ವಾಹನ ಸಂಖ್ಯೆ ಕೆಎ– 40 ಜಿ 63 ರಲ್ಲಿ ನಾನು ಸಿಬ್ಬಂದಿ, ಪಂಚರು ಹಾಗೂ ತಹಸೀಲ್ದಾರ್ ರವರು ಠಾಣೆಯಿಂದ ಬೆಃ 11–50 ಕ್ಕೆ ಹೊರಟು ಕಂದವಾರ ಗ್ರಾಮಕ್ಕೆ ಮಃ 12–00 ಗಂಟೆಗೆ ಹೋದಾಗ ಅಲ್ಲಿಗೆ ಚಾಸಾ–3 ರವರು ಬಂದಿದ್ದು , ಅವರಿಗೆ ದಾಳಿಯ ಬಗ್ಗೆ ಮಾಹಿತಿ ನೀಡಿ ನೋಟೀಸ್ ಅನ್ನು ಜಾರಿ ಮಾಡಿರುತ್ತೇನೆ.

5. ನಂತರ ಗ್ರಾಮದ ಹೊರ ಭಾಗದಲ್ಲಿ, ವಾಹನಗಳನ್ನು ನಿಲ್ಲಿಸಿ, ಪಂಚರು ಮತ್ತು ನಾವು ಒಬ್ಬರಿಗೊಬ್ಬರೂ ಅಂಗ ಶೋಧನೆ ಮಾಡಿಕೊಂಡು ನಮ್ಮ ಬಳಿ ಯಾವುದೇ ಮಾದಕ ವಸ್ತು ಇಲ್ಲದಿರುವ ಬಗ್ಗೆ ಖಚಿತ ಪಡಿಸಿಕೊಂಡಿರುತ್ತೇವೆ. ನಂತರ ಮತ್ತೊಮ್ಮೆ ಬಾತ್ಮಿದಾರರನ್ನು ಸಂಪರ್ಕಿಸಿ ಮಾಹಿತಿಯನ್ನು ಖಚಿತ ಪಡಿಸಿಕೊಂಡಿರುತ್ತೇನೆ. ನಂತರ ನಾವುಗಳೆಲ್ಲರೂ ಜಮೀನುಗಳ ಮೇಲೆ ನಡೆದುಕೊಂಡು ಬಾತ್ಮೀ ಸ್ಥಳಕ್ಕೆ ಹೋಗಿ ಪರಿಶೀಲಿಸಲಾಗಿ ಒಂದು ಜಮೀನಿನಲ್ಲಿ ಗುಲಾಬಿ ಮತ್ತು ಕನಾಕಾಂಬರ ಹೂ ಗಿಡಗಳನ್ನು

ಬೆಳಸಿದ್ದು , ಅವುಗಳ ಮಧ್ಯೆ 5 ಗಾಂಜಾ ಗಿಡಗಳನ್ನು ಬೆಳೆಸಿರುವುದು ಕಂಡು ಬಂದಿದ್ದು , ನಂತರ ಗಾಂಜಾ ಗಿಡಗಳನ್ನು ಬೆಳೆದಿರುವ ಆರೋಪಿಯನ್ನು ಪತ್ತೇ ಮಾಡಲು ಚಾಸಾ -7 ಮತ್ತು 8 ರವರನ್ನು ನೇಮಕ ಮಾಡಿ ಕಳುಹಿಸಿರುತ್ತೇನೆ. ಸದರಿರವರು ಕಂದಾವರ ಗ್ರಾಮದ ಅವರ ಮನೆಯ ಬಳಿ ಇದ್ದ ಆರೋಪಿಯನ್ನು ವಶಕ್ಕೆ ಪಡೆದುಕೊಂಡು ಬಂದು ನನ್ನ ಮುಂದೆ ಹಾಜರುಪಡಿಸಿರುತ್ತಾರೆ.

6. ಸದರಿ ಆಸಾಮಿ ನಮ್ಮಗಳನ್ನು ಕಂಡು ನೀವೆಲ್ಲಾ ಯಾರು ಎಂದು ಪ್ರಶ್ನಿಸಿರುತ್ತಾರೆ. ಆಗ ನಾವು ನಮ್ಮ ಗುರುತಿನ ಚೀಟಿಯನ್ನು ತೋರಿಸಿ ನಮಗೆ ಬಂದ ಮಾಹಿತಿಯನ್ನು ತಿಳಿಸಿ ತನಿಖೆಗೆ ಸಹಕರಿಸುವಂತೆ ತಿಳಿಸಿರುತ್ತೇನೆ. ನಂತರ ಆತನ ಹೆಸರು ಮತ್ತು ವಿಳಾಸ ಕೇಳಲಾಗಿ ವೇಣುಗೋಪಾಲ್ ಕೆ ಎಸ್ ಬಿನ್ ಸತ್ಯ ನಾರಾಯಣಪ್ಪ, 39 ವರ್ಷ , ಬಲಿಜಿಗ , ಜರಾಯ್ತಿ ಕೆಲಸ ಎಂದು ತಿಳಿಸಿರುತ್ತಾರೆ. ನಂತರ ನಾನು ಸದರಿ ವ್ಯಕ್ತಿಯನ್ನು ಕುರಿತು ತಮ್ಮ ಜಮೀನಿನಲ್ಲಿ ಮಾದಕ ವಸ್ತು ಗಾಂಜಾ ಗಿಡ ಬೆಳೆಯಲು ಪರವಾನಿಗೆ ಇದೆಯಾ ಎಂದು ವಿಚಾರಿಸಲಾಗಿ, ಆತ ಯಾವುದೇ ಪರವಾನಿಗೆ ಇಲ್ಲ ಎಂದು ಹಾಗೂ ಸದರಿ ಗಾಂಜಾ ಗಿಡಗಳನ್ನು ಮಾರಾಟ ಮಾಡುವ ಉದ್ದೇಶದಿಂದ ಬೆಳೆದಿರುವುದಾಗಿ ನುಡಿದಿರುತ್ತಾನೆ. ನಂತರ ಅಕ್ರಮವಾಗಿ ಬೆಳೆದಿರುವ ಗಾಂಜಾ ಗಿಡಗಳನ್ನು ವಶ ಪಡಿಸಿಕೊಳ್ಳಬೇಕಾಗಿದ್ದು ಅದಕ್ಕೆ ನಿನ್ನ ಅಭ್ಯಂತರವಿದೆಯಾ ಎಂದು ವಿಚಾರಿಸಲಾಗಿ ಆತ ಯಾವುದೇ ಅಭ್ಯಂತರವಿರುವುದಿಲ್ಲ ಎಂದು ತಿಳಿಸಿರುತ್ತಾನೆ . ನಂತರ ನಾನು, ಸ್ಥಳದಲ್ಲಿದ್ದ ಚಾಸಾ-4 ಗಣಪತಿ ಶಾಸ್ತ್ರೀ ತಹಸೀಲ್ದಾರ್ ರವರನ್ನು ಗಾಂಜಾ ಗಿಡಗಳನ್ನು ವಶ ಪಡಿಸಿಕೊಳ್ಳಬೇಕೆಂದು ಮನವಿ ಮಾಡಿಕೊಂಡಿರುತ್ತೇನೆ.

7.ನಂತರ ತಹಸಿಲ್ದಾರ್ ರವರು ವೇಣುಗೋಪಾಲ್ ರವರನ್ನು ವಿಚಾರಣೆಮಾಡಿ ಆತನ ಜಮೀನಿನಲ್ಲಿ ಬೆಳೆದಿರುವ ಗಾಂಜಾವನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಳ್ಳಬಹುದೇ ಎಂದು ಕೇಳಲಾಗಿ ವೇಣುಗೋಪಾಲ್ ಸರಿ ಎಂದು ಒಪ್ಪಿರುತ್ತಾರೆ. ನಂತರ ಗೆಜೆಟೆಡ್ ಅಧಿಕಾರಿಗಳು, ನಾನು ಮತ್ತು ಸಿಬ್ಬಂದಿ ವೇಣುಗೋಪಾಲ್ ರವರೊಂದಿಗೆ ಜಮೀನಿನಲ್ಲಿ ಬೆಳೆದಿದ್ದ ಗಾಂಜಾ ಗಿಡಗಳನ್ನು ಪರಿಶೀಲನೆ ಮಾಡಲಾಗಿ ಒಟ್ಟು 5 ಗಿಡಗಳನ್ನು ಬೆಳೆದಿದ್ದು, ಅವು 4 ರಿಂದ 4 1/2 ಅಡಿ ಎತ್ತರ ಹಾಗೂ 1/2 ಇಂಚು ಸುತ್ತಳತೆಯ ಕಾಂಡಾವನ್ನು ಹೊಂದಿರುತ್ತವೆ . ಸದರಿ ಗಿಡಗಳು ಎಲೆ ,

ಮೊಗ್ಗು ಹಾಗೂ ರೆಂಬೆಗಳನ್ನು ಹೊಂದಿದ ಹಸಿ ಗಿಡಗಳಾಗಿದ್ದು , ಅವುಗಳನ್ನು ಬೇರು ಸಮೇತ ಚನಿಕೆಯಿಂದ ಕಿತ್ತು ನಮ್ಮ ಜೊತೆ ತೆಗೆದಕೊಂಡು ಹೋಗಿದ್ದ ಡಿಜಿಟಲ್ ತುಾಕದ ಯಂತ್ರದಲ್ಲಿ ತುಾಕ ಮಾಡಲಾಗಿ 10 ಕೆಜಿ 136 ಗ್ರಾಂ ತೂಕವಿದ್ದು , ಅದರ ಅಂದಾಜು ಮೌಲ್ಯ 3 ಲಕ್ಷ ರೂಗಳು ಎಂದು ನಿರ್ದರಿಸಲಾಯಿತು. ಸದರಿ ಗಾಂಜಾ ಗಿಡಗಳನ್ನು ಒಂದು ಬಿಳಿ ಪ್ಲಾಸ್ಟಿಕ್ ಚೀಲದಲ್ಲಿ ತುಂಬಿ, ಒಲೆದು ಹರಗಿನ ಸಹಾಯಂದಿಂದ ಮೊಹರು ಮಾಡಿ ಎನ್ ಅಕ್ಷರದಿಂದ ಪಂಚರ ಸಮಕ್ಷಮ ಸೀಲ್ ಮಾಡಿ ಸೀಜ್ ಮಾಡಿ, ಪಂಚರು ಹಾಗೂ ನಮ್ಮಗಳ ಸಹಿಗಳುಳ್ಳ ಚೀಟಿಯನ್ನು ಅದಕ್ಕೆ ಅಂಟಿಸಿ, ಕ್ರಮ ಸಂಖ್ಯೆ –1 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ಗಾಂಜಾ ಗಿಡಗಳನ್ನು ಮುಂದಿನ ಕ್ರಮಕ್ಕಾಗಿ ಅಮಾನತ್ತು ಪಡಿಸಿಕೊಂಡು, ವಿವರವಾದ ಪಂಚನಾಮೆಯನ್ನು ಮಃ 12 – 30 ರಿಂದ 2 – 30 ರ ತನಕ ಜರುಗಿಸಿ ,ನಾನು ಹಾಗೂ ಪಂಚರು ಸಹಿಗಳನ್ನು ಮಾಡಿರುತ್ತೇವೆ. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–5 ಎಂದು, ಸಾಕ್ಷಿಯ ಸಹಿಯನ್ನು ನಿಪಿ–5 (ಎ) ಎಂದು , ಆರೋಪಿಯನ್ನು ಸಹಿಯನ್ನು ನಿಪಿ–5 (ಬಿ) ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಭಾವ ಚಿತ್ರಗಳನ್ನು ತೆಗೆದಿದ್ದು , ಅವುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿ ಭಾವ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ–6 ಎಂದು ಗುರುತಿಸಲಾಯಿತು. ಆರೋಪಿಯನ್ನು ವಶಕ್ಕೆ ಪಡೆಯಲಾಗಿರುತ್ತದೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

8. ನಂತರ ಮಾಲು ಮತ್ತು ಆರೋಪಿಯೊಂದಿಗೆ ಠಾಣೆಗೆ ಹಿಂದುರುಗಿ, ಒಂದು ವರದಿಯೊಂದಿಗೆ ಚಾಸಾ–12 ಪಿಐ ಮಂಜುನಾಥ ರವರ ಮುಂದೆ ಹಾಜರುಪಡಿಸಿರುತ್ತೇನೆ. ಸಾಕ್ಷಿಯು ಸದರಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ–7 ಎಂದು , ಸಾಕ್ಷಿಯ ಸಹಿಯನ್ನು ನಿಪಿ–7 (ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲು ಆರೋಪಿತರ ಪರ ಶ್ರೀ ಆರ್ ಜಿ ರವರಿಂದ**

9. ಘಟನಾ ಸ್ಥಳವನ್ನು ಯಾರು ತೋರಿಸಿಲ್ಲ, ಮಾಹಿತಿ ಬಂದ ಮೇರೆಗೆ ನಾವೇ ಸದರಿ ಸ್ಥಳಕ್ಕೆ ಹೋಗಿರುತ್ತೇವೆ. ನಾವು ಸ್ಥಳಕ್ಕೆ ಹೋದಾಗ ಅಲ್ಲಿ ಯಾರು ಇರಲಿಲ್ಲ.

ಘಟನಾ ಸ್ಥಳದ ಆಜೂ ಬಾಜು ನೀರಾವರಿ ಜಮೀನು ಇದೆ ಎಂದರೆ ಸರಿ. ಬೇರೆ ಜಮೀನಿನ ಮಾಲೀಕರನ್ನು ಸ್ಥಳಕ್ಕೆ ಕರೆಸಿರುವುದಿಲ್ಲ. ಘಟನಾ ಸ್ಥಳದ ಜಮೀನು ಎಷ್ಟು ವಿಸ್ತೀರ್ಣ ಎಂದು ನಾನು ಅಳತೆ ಮಾಡಿರುವುವುದಿಲ್ಲ. ಘಟನಾ ಸ್ಥಳ ಎಂದು ಹೇಳಲಾದ ಜಮೀನಿನ ಸರ್ವೇ ನಂಬರ್ 160 ಎನ್ನುವುದನ್ನು ನಾನು ಸ್ಥಳದಲ್ಲಿ ಪರಿಶೀಲಿಸಿ, ಖಚಿತ ಪಡಿಸಿಕೊಂಡಿರುವುದಿಲ್ಲ. ಸಾಕ್ಷಿಯು ಸ್ವತಃ ನುಡಿಯುತ್ತಾರೆ, ತನಗೆ ಬಂದ ಮಾಹಿತಿಯಂತೆ ಸ್ಥಳಕ್ಕೆ ಬೇಟಿ ಕೊಟ್ಟು ಅಲ್ಲಿ ಗಾಂಜಾ ಗಿಡಗಳನ್ನು ಬೆಳೆದಿರುವುದನ್ನು ನೋಡಿ ಖಚಿತ ಪಡಿಸಿಕೊಂಡು, ಜಮೀನು ಮಾಲೀಕರನ್ನು ಕರೆಯಿಸಿ ದಾಳಿ ಮಾಡಿರುತ್ತೇನೆ.

10. ದಾಳಿ ಕಾಲದಲ್ಲಿ ಜಮೀನಿನ ಮಾಲೀಕರು ಸ್ಥಳದಲ್ಲಿ ಹಾಜರಿರಲಿಲ್ಲ ಎಂದರೆ ಸಾಕ್ಷಿಯು ಆರೋಪಿಯು ಜಮೀನಿನ ಮಾಲೀಕನಾಗಿದ್ದು, ಸದರಿ ಜಮೀನು ತನ್ನ ತಂದ ಹೆಸರಿನಲ್ಲಿ ಇರುವುದಾಗಿ ತಿಳಿಸಿದ್ದು ಮತ್ತು ಆರೋಪಿಯೇ ವ್ಯವಸಾಯ ಮಾಡುತ್ತಿರುವುದಾಗಿ ಕಂಡು ಬಂದಿರುತ್ತದೆ. ಆರೋಪಿಯನ್ನು ಹೊರತು ಪಡಿಸಿ ಸದರಿ ಜಮೀನಿನಲ್ಲಿ ಆರೋಪಿ ವ್ಯವಸಾಯ ಮಾಡುತ್ತಿರುವ ಬಗ್ಗೆ, ಬೇರೆ ಯಾರು ತಿಳಿಸಿರುವುದಿಲ್ಲ. ದಾಳಿ ಸಂದರ್ಭದಲ್ಲಿ ಸದರಿ ಜಮೀನಿನ ಲೀಜ್ ಹೋಲ್ಡರ್ ಶ್ರೀನಿವಾಸ್ ರವರನ್ನು ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ದಾಳಿ ಕಾಲಕ್ಕೆ ಆ ಬಗ್ಗೆ ತನಿಖೆ ಮಾಡಲಾಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ–5 ರ 4 ನೇ ಪುಟದ ಕೊನೆಯ ಭಾಗದಲ್ಲಿ, ಜಮೀನಿನ ಮಾಲೀಕತ್ವ, ಜಮೀನನ್ನು ಹಣದ ಅವಶ್ಯಕತೆಗಾಗಿ ಬೋಗ್ಯಕ್ಕೆ ಹಾಕಿರುವ ವಿಚಾರವನ್ನು,ವಿಚಾರಣೆ ಮಾಡಿ ನಮೂದಿಸಿರುತ್ತೇನೆ ಎಂದರೆ ಸರಿ. ಆ ಸಂದರ್ಭದಲ್ಲಿ ಜಮೀನನ್ನು ಯಾವಾಗ ಬೋಗ್ಯಕ್ಕೆ ಹಾಕಲಾಗಿದೆ ಮತ್ತು ಎಷ್ಟು ಅವಧಿಗೆ ಹಾಕಲಾಗಿದೆ ಎಂಬುದರ ಬಗ್ಗೆ ನಾನು ವಿಚಾರಣೆ ಮಾಡಿರುವುದಿಲ್ಲ.

10. ನಿಪಿ–6 ರ ಪೋಟೋ ಗಳಲ್ಲಿ ಗಾಂಜಾ ಗಿಡಗಳು ಗುಂಪಲ್ಲಿ ಬೆಳೆದಿರುವಂತೆ ಕಂಡು ಬರುತ್ತದೆ. 5 ಗಾಂಜಾ ಗಿಡಗಳು ಒಟ್ಟಾಗಿ ಗುಂಪಿನಲ್ಲಿ ಬೆಳೆದಿರುವ ಬಗ್ಗೆ ನಿಪಿ–5

ರಲ್ಲಿ ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–6 ರಲ್ಲಿ ಕಂಡು ಬರುವ 2 ಪೋಟೋಗಳಲ್ಲಿ ಇರುವ ವ್ಯಕ್ತಿಗಳು ಬೇರೆ ಬೇರೆ ಎಂದರೆ ಸರಿಯಲ್ಲ. ಚಾಸಾ–3 ಶ್ರೀದರ್ ರವನ್ನು ನಿಪಿ–6 ರ ಪೋಟೋಗಳಲ್ಲಿ ಗುರುತಿಸಲು ಸಾಧ್ಯವೇ ಎಂದರೆ ಸಾಕ್ಷಿಯು ಕೆಂಪು ಟಿ – ಶರ್ಟ್ ಹಾಕಿರುವ ವ್ಯಕ್ತಿಯನ್ನು ಗುರುತಿಸಿ ಅವರೇ ಇರಬಹುದು, ತುಂಬಾ ಕಾಲವಾಗಿರುವ ಕಾರಣ ನನಗೆ ನಿಖರವಾಗಿ ಗುರುತಿಸಲು ಆಗುವುದಿಲ್ಲ ಎನ್ನುತ್ತಾರೆ. ನಿಪಿ–6 ರ ಪೋಟೋದಲ್ಲಿ ಚಾಸಾ–3 ಶ್ರೀದರ್ ಕಂಡು ಬರುತ್ತಿಲ್ಲ ಎಂದರೆ ಸರಿಯಲ್ಲ.

11. ದಾಳಿ ಪಂಚನಾಮೆಯಲ್ಲಿ ಗಾಂಜಾ ಗಿಡಗಳನ್ನು ಪ್ರತ್ಯೇಕವಾಗಿ ತೂಕ ಮಾಡಿದ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿಪಿ–6 ರಲ್ಲಿ ಪಂಚನಾಮೆ ಬರೆಯುತ್ತಿರುವುದು ಕಂಡು ಬರುತ್ತಿರುವುದಿಲ್ಲ ಎಂದರೆ ಸರಿ. ನಿಪಿ–6 ರ ಪೋಟೋ ಗಳಲ್ಲಿ ಗಾಂಜಾ ಗಿಡಗಳನ್ನು ಕಿತ್ತು ತೂಕ ಮಾಡುತ್ತಿರುವುದು ಕಂಡು ಬರುತ್ತಿರುವುದಿಲ್ಲ ಎಂದರೆ ಸಾಕ್ಷಿ ತೂಕ ಮಾಡುವಾಗ ತೆಗೆದ ಪೋಟೋಗಳನ್ನು ತನಿಖಾಧಿಕಾರಿಗಳು ದೋಷಾರೋಪಣಾ ಪತ್ರದೊಂದಿಗೆ ಹಾಜರುಪಡಿಸದೇ ಇರಬಹುದು ಎನ್ನುತ್ತಾರೆ. ತೂಕದ ಯಂತ್ರವನ್ನು ನಾವು ಸ್ಥಳಕ್ಕೆ ತೆಗೆದುಕೊಂಡು ಹೋಗದ ಕಾರಣ ಹಾಗೂ ಗಿಡಗಳನ್ನು ತೂಕ ಮಾಡದ ಕಾರಣ ಯಾವುದೇ ಪೋಟೋಗಳನ್ನು ತೆಗೆದಿರುವುದಿಲ್ಲ ಮತ್ತು ಆ ಕಾರಣದಿಂದ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

12. ಗಾಂಜಾ ಗಿಡಗಳನ್ನು ಚನಿಕೆ ಮೂಲಕ ಯಾರು ಕಿತ್ತರು ಎಂಬುದರ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. ನಿಪಿ–6 ರ ಪೋಟೋಗಳನ್ನು ಚಾಸಾ –5, ಎ ಎಸ್ ಐ ನಾರಾಯಣರೆಡ್ಡಿ ರವರು ತೆಗೆದಿರುತ್ತಾರೆ. ನಿಪಿ–5 ರ ಮಹಜರ್ ಅನ್ನು ಚಾಸಾ–5 ರವರೇ ಬರೆದಿರುತ್ತಾರೆ ಎಂದರೆ ಸರಿ. ಜಮೀನಿನ ಚೆಕ್ಕು ಬಂದಿಯನ್ನು ಆರೋಪಿತನೇ ತಿಳಿಸಿರುತ್ತಾರೆ . ಈ ಬಗ್ಗೆ ಪಂಚನಾಮೆಯಲ್ಲಿ ನಮೂದಿಸಿರುವುದಿಲ್ಲ.

13. ಜಮೀನಿನಿಂದ ಆರೋಪಿಯ ಮನೆ ಎಷ್ಟು ದೂರದಲ್ಲಿದೆ ಎಂದು ನನಗೆ ತಿಳಿದಿರುವುದಿಲ್ಲ. ಆರೋಪಿಯನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಬರಲು ಸುಮಾರು 10 ನಿಮಿಷಗಳು ತೆಗೆದುಕೊಂಡಿರಬಹುದು. ಸರ್ವೇ ನಂಬರ್ 160 ರ ಜಮೀನು ಕಂದವಾರ ಗ್ರಾಮದಲ್ಲಿ ಅಸ್ತಿತ್ವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಅಂತಿಮ ವರದಿಯಲ್ಲಿರುವ ಆರ್ ಟಿ ಸಿ ಸರ್ವೇ ನಂಬರ್ 160/4 ದಾಳಿ ಜರುಗಿಸಿದ ಜಮೀನಿಗೆ ಸಂಬಂದಿಸಿಲ್ಲ ಎಂದರೆ ಸಾಕ್ಷಿ ತಾನು ದಾಖಲೆಯನ್ನು ಪರಿಶೀಲಿಸಿರುವುದಿಲ್ಲ, ಆ ಬಗ್ಗೆ ತನಿಖಾಧಿಕಾರಿಯನ್ನು ಕೇಳಬೇಕು ಎಂದು ನುಡಿಯುತ್ತಾರೆ. ದಾಳಿ ಪಂಚನಾಮೆಯಲ್ಲಿ ಆರೋಪಿಯ ತಂದೆಗೆ ಸೇರಿದ ಜಮೀನು ಎಲ್ಲಿಂದ ಆರಂಭ ವಾಗಿ ಎಲ್ಲಿಗೆ ಕೊನೆಗೊಳ್ಳುತ್ತದೆ ಎಂಬುದರ ಬಗ್ಗೆ ನಮೂದಿಸಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ತಾನು ತನಿಖೆ ನಡೆಸಿರುವುದಿಲ್ಲ ಎಂದು ನುಡಿದಿರುತ್ತಾರೆ. ಜಮೀನಿನ ಯಾವ ಭಾಗದಲ್ಲಿ ಗಾಂಜಾ ಗಿಡಗಳನ್ನು ಬೆಳೆಯಲಾಗಿತ್ತು ಎಂದು ನಮೂದಿಸಿಲ್ಲ ಎಂದರೆ , ಇರಬಹುದು.

14. ನಾನು ತಹಸೀಲ್ದಾರ್,ಚಿಕ್ಕಬಳ್ಳಾಪುರ ರವರ ಜೊತೆ ಪತ್ರ ವ್ಯವಹಾರ ಮಾಡಿದ್ದು, ಗೆಜೆಟೆಡ್ ಅಧಿಕಾರಿಯೊಂದಿಗೆ ಅಲ್ಲ ಎಂದರೆ ಸರಿಯಲ್ಲ. ನಿಪಿ-2 ರಲ್ಲಿ ನಾನು ತಹಸೀಲ್ದಾರ್ ರವರನ್ನು ಗೆಜೆಟೆಡ್ ಅಧಿಯಾರಿಯಾಗಿ ತನಿಖೆ ಮಾಡಲು ಹಾಗೂ ಪಂಚರನ್ನು ಸಹ ಕರೆ ತರುವಂತೆ ಕೇಳಿದ್ದೇನೆ ಎಂದರೆ ಸರಿ. ನಿಪಿ-2 ರಲ್ಲಿ ಗೆಜೆಟೆಡ್ ಅಧಿಕಾರಿಯಾಗಿ ಚಾಸಾ-4 ರವರು ಸ್ವೀಕರಿಸಿದ ಬಗ್ಗೆ ನಮೂದು ಇಲ್ಲ ಎಂದರೆ ಸಾಕ್ಷಿಯು ಕಛೇರಿಯ ಮೊಹರು ಕಂಡು ಬರುತ್ತದೆ ಎಂದು ನುಡಿಯುತ್ತಾರೆ. ನಿಪಿ-3 ಪ್ರಕಾರ ನಗರಸಭಾ ಕಮೀಷನರ್ ರವರು ಒಬ್ಬರು ಪಂಚರನ್ನು ಕಳುಹಿಸಿದ್ದರು. ಯಾರನ್ನು ಪಂಚರಾಗಿ ನೇಮಸಿ ಕಳುಹಿಸಿದ್ದರು ಎಂಬ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿ. ಪಂಚರಿಗೆ ನಾನು ಪ್ರತ್ಯೇಕವಾಗಿ ನೋಟೀಸ್ ನೀಡಿರುವುದಿಲ್ಲ, ಸಾಮಾನ್ಯ ನೋಟೀಸ್ ನೀಡಿರುತ್ತೇನೆ. ನಿಪಿ-4 ರ ನೋಟೀಸ್ ಅನ್ನು ಚಾಸಾ-2 ರವರಿಗೆ ಠಾಣೆ ಬಳಿ ಹಾಗೂ

ಚಾಸಾ–3 ರವರಿಗೆ ಕಂದವಾರ ಗ್ರಾಮದಲ್ಲಿ ಜಾರಿ ಮಾಡಿರುತ್ತೇನೆ. ಚಾಸಾ–2 ಮತ್ತು 3 ರವರಿಗೆ ನಾನು ಹೇಳಿದ ಸ್ಥಳದಲ್ಲಿ ನೋಟೀಸ್ ಜಾರಿ ಮಾಡಿಲ್ಲ ಎಂದರೆ ಸರಿಯಲ್ಲ.

8. ಆರೋಪಿಗೆ ನಾನಾಗಲೀ, ಚಾಸಾ–4 ರವರಾಗಲೀ ಯಾರ ಸಮಕ್ಷಮದಲ್ಲಿ ಗಾಂಜಾ ಗಿಡಗಳನ್ನು ಪರಿಶೀಲಿಸಿ, ತನಿಖೆ ನಡೆಸಬೇಕು ಎಂದು ತಿಳುವಳಿಕೆ ನೋಟೀಸ್ ನೀಡಿಲ್ಲ ಎಂದರೆ ಸಾಕ್ಷಿಯು ಕಂದಾಯ ಜಮೀನಿನಲ್ಲಿ ತನಿಖೆ ಮಾಡುವ ಉದ್ದೇಶವಿದ್ದ ಕಾರಣ, ಆ ತಿಳುವಳಿಕೆ ನೋಟೀಸ್ ಅನ್ನು ನೀಡಿರುವುದಿಲ್ಲ. ದಾಳಿ ಸಂದರ್ಬದಲ್ಲಿ ಜಮೀನಿನ ಮಾಲೀಕತ್ವದ ಬಗ್ಗೆ ತಿಳಿದುಕೊಳ್ಳಲು ಪ್ರಯತ್ನಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿಯನ್ನು ವಿಚಾರಣೆ ಮಾಡಿದ ಹೊರತು ಬೇರೆ ತನಿಖೆ ಮಾಡಿರುವುದಿಲ್ಲ ಎಂದು ನುಡಿದಿರುತ್ತಾರೆ. ನಿಪಿ–2 ಮತ್ತು 3 ರಲ್ಲಿ ಸಮಯಗಳನ್ನು ನಮೂದಿಸಿಲ್ಲ ಎಂದರೆ ಇರಬಹುದು. ಆರೋಪಿಯ ತಂದೆ ಜಮೀನಿಗೆ ನಾನು ಯಾವತ್ತು ಬೇಟಿ ನೀಡಿಲ್ಲ, ಯಾವುದೇ ತನಿಖೆ ಮಾಡಿದೇ ಇದ್ದರೂ ಆರೋಪಿ ವಿರುದ್ದ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 160 ರ ಜಮೀನಿನ ಮಾಲೀಕನನ್ನು ದಸ್ತಗಿರಿ ಮಾಡದೇ , ಸರ್ವೇ ನಂಬರ್ 160/4 ರ ಮಾಲೀಕನಾದ ಆರೋಪಿಯನ್ನು ದಸ್ತಗಿರಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿ ಸದರಿ ಜಮೀನು ನನಗೆ ಸೇರಿಲ್ಲ ಎಂದು ನಮಗೆ ತಿಳಿಸಿದ್ದರೂ ಸಹ, ಅದನ್ನು ಮರೆ ಮಾಚಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿ ದಾಳಿ ಸಂದರ್ಭ ದಲ್ಲಿ ಗಾಂಜಾ ಬೆಳೆದಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ತಿಳಿಸಿದ್ದರುೂ ಎಂದರೆ ಸರಿಯಲ್ಲ. ಈ ಬಗ್ಗೆ ನನಗೆ ತಿಳಿದಿದ್ದರೂ , ಆರೋಪಿಯನ್ನು ಹೆದರಿಸಿ , ಬೆದರಿಸಿ ಸುಳ್ಳು ಪ್ರಕರಣದ ದಾಖಲು ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ –5 ರ ಪಂಚನಾಮೆಯನ್ನು ಠಾಣೆಯಲ್ಲಿ ಬರೆಯಲಾಗಿದೆ ಎಂದರೆ ಸರಿಯಲ್ಲ. ನಿಪಿ –5 ಅನ್ನು ಸ್ಥಳದಲ್ಲಿ ಬರೆಯದ ಕಾರಣ ಪೋಟೋದಲ್ಲಿ ಕಂಡು ಬರುತ್ತಿರುವುದಿಲ್ಲ ಎಂದರೆ

ಸರಿಯಲ್ಲ. ಪಂಚರು ಹಾಗೂ ನಾವು ನಿಪಿ–5 ಕ್ಕೆ ಠಾಣೆಯಲ್ಲಿ ಸಹಿಗಳನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**